ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ

ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 1544/2022

.....................................................................

CW 14
PW 09

| | | |
|---|---|---|
| ಹೆಸರು | : | ವಿನೋದ ಕಾಳಪ್ಪನವರ |
| ತಂದೆಯ ಹೆಸರು | : | ಸುರೇಶ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಎಸ್ ಐ ಟಿ, ಧರ್ಮಸ್ಥಳ |
| ವಾಸಸ್ಥಳ | : | ಧರ್ಮಸ್ಥಳ. |

ದಿನಾಂಕ 25-04-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

2022 ರ ಜೂನ್ ತಿಂಗಳಿನಿಂದ 2025 ರ ಮೇ ತಿಂಗಳ ವರೆಗೆ ನಾನು ಹಳಿಯಾಳ ಪೊಲೀಸ ಠಾಣೆಯ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13-10-2022 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಹೇಳಿದಂತ ದೂರನ್ನು ಗಣಕೀಕರಣಗೊಳಿಸಿಕೊಂಡು ಠಾಣಾ ಗುನ್ನಾ ನಂಬರ 183/2022 ಅನ್ನು ಕಲಂ 279, 337 ಮತ್ತು 338 ಐ ಪಿ ಸಿ ಅಡಿಯಲ್ಲಿ ದಾಖಲಿಸಿಕೊಂಡು ಮಾನ್ಯ ನ್ಯಾಯಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದ ಅವರ ಸಹಿಯನ್ನು **ನಿಪಿ 1 ಬಿ ಎಂದು** ಗುರುತಿಸಲಾಯಿತು. ಪ್ರ.ವ.ವ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ 16 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 16 ಎ ಎಂದು** ಗುರುತಿಸಲಾಯಿತು.

ಅದೇ ಚಾಸಾ 2 ಮತ್ತು 3 ರವರಿಗೆ ಘಟನಾ ಜಾಗದ ಪಂಚನಾಮೆಗೆ ಸಹಕರಿಸಲು ಮೌಖಿಕವಾಗಿ ಕೋರಿಕೊಂಡಂತೆ ಅವರು ಒಪ್ಪಿ ಬಂದಂತೆ ಪ್ರತ್ಯಕ್ಷ ಸಾಕ್ಷಿದಾರ ಚಾಸಾ 9 ರವರು ತೋರಿಸಿದ ಹಳಿಯಾಳ ಶಹರದ ಹೊರಗಿನ ಗುತ್ತಿಗೇರಿಯಲ್ಲಿ ಶಿವಾಜಿ ಆಟೋ ಗ್ಯಾರೇಜ್ ಹತ್ತಿರ ಪಂಚರ ಸಮಕ್ಷಮ ಪಂಚನಾಮೆಯನ್ನು ಪಂಚರ ಸಮಕ್ಷಮ 02-30 ರಿಂದ 03-30 ರ ವರೆಗೆ ಜರುಗಿಸಿ, ಕಚ್ಚಾ ನಕಾಶೆ ತೆಗೆದು, ಭಾವಚಿತ್ರವನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 6 ಸಿ ಎಂದು**

ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 8 ಸಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ 2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಘಟನೆಯ ಬಗ್ಗೆ ವಿವರಿಸಿ ಬೈಕ ಪರಿಶೀಲನಾ ಪಂಚನಾಮೆಗೆ ಸಹಕರಿಸಲು ಕೋರಿಕೊಂಡಂತೆ ಅವರು ಒಪ್ಪಿಬಂದಂತೆ ಪ್ರತ್ಯಕ್ಷ ಸಾಕ್ಷಿದಾರ ಚಾಸಾ9 ರವರು ತೋರಿಸಿದ ಮೋಟಾರ ಸೈಕಲ್ ನಂಬರ ಕೆಎ 65-ಎಚ್-0408 ಪಂಚನಾಮೆಯನ್ನು ಪಂಚರ ಸಮಕ್ಷಮ 03-45 ರಿಂದ 04-45 ರ ವರೆಗೆ ಠಾಣಾ ಆವರಣದಲ್ಲಿ ಪಂಚನಾಮೆ ಜರುಗಿಸಿ, ಭಾವಚಿತ್ರವನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 9 ಸಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ.

ನಂತರ ಅದೇ ದಿನ ಚಾಸಾ 5 ಮತ್ತು 6 ರವರಿಗೆ ಅಪಘಾತಗೊಳಿಸಿದ ಬಸ್ ಪರಿಶೀಲನಾ ಪಂಚನಾಮೆಯಗೆ ಸಹಕರಿಸಲು ಮೌಖಿಕವಾಗಿ ಕೋರಿಕೊಂಡಂತೆ ಅವರು ಒಪ್ಪಿ ಬಂದಂತೆ ಪ್ರತ್ಯಕ್ಷ ಸಾಕ್ಷಿದಾರ ಚಾಸಾ 7 ರವರು ತೋರಿಸಿದ ಕೆಎ-25-ಎಫ್-2380 ಪಂಚನಾಮೆಯನ್ನು ಪಂಚರ ಸಮಕ್ಷಮ 04-50 ರಿಂದ 05-50 ರ ವರೆಗೆ ಠಾಣಾ ಆವರಣದಲ್ಲಿ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 4 ಎ ಎಂದು** ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ 7 ರಿಂದ 10 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 14-10-2022 ರಂದು ಚಾಸಾ 12 ರವರಲ್ಲಿ ಅಪಘಾತಕ್ಕೋಳಪಟ್ಟ ವಾಹನಗಳ ಯಾಂತ್ರಿಕ ಪರೀಕ್ಷಾ ವರದಿಯನ್ನು ನೀಡುವಂತೆ ಕೋರಿಕೆ ಪತ್ರವನ್ನು ನೀಡಿರುತ್ತೇನೆ.

ನಂತರ ಆರೋಪಿ 1 ರವರಿಗೆ ಕಲಂ 41 ರಡಿಯಲ್ಲಿ ನೋಟೀಸ ಜಾರಿ ಮಾಡಿರುತ್ತೇನೆ ಮತ್ತು ಅದೇ ದಿನ ಕೆ ಎಸ್ ಆರ್ ಟಿ ಸಿ ಬಸ್ ನ ಜಿ ಪಿ ಎ ಮಾಲಕರಾದ ಸಿದ್ದಪ್ಪ ಅಣ್ಣಪ್ಪ ನಾಗಣಿ ರವರಿಗೆ ಕಲಂ 133 ರಡಿಯಲ್ಲಿ ನೊಟೀಸ ನೀಡಿರುತ್ತೇನೆ. ಸದರಿ ನೊಟೀಸ ನ್ನು ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ಬಾಂಡ್ ಪತ್ರ ಪಡೆದು ಬಸ್ ಅನ್ನು ಬಿಡುಗಡೆ ಮಾಡಿರುತ್ತೇನೆ. ನೊಟೀಸ್ ಅನ್ನು **ನಿಪಿ 17 ಎಂದು,** ಉತ್ತರವನ್ನು **ನಿಪಿ 18 ಎಂದು,** ಬಾಂಡ್ ಪತ್ರವನ್ನು **ನಿಪಿ 19 ಎಂದು** ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು **ನಿಪಿ 17 ಎ, 18 ಎ ಮತ್ತು 19 ಎ ಎಂದು** ಗುರುತಿಸಲಾಯಿತು.

ಅದೇ ದಿನ ಸದರಿ ಸಿದ್ದಪ್ಪ ಅಣ್ಣಪ್ಪ ನಾಗಣಿ ರವರು ನೀಡಿದ ಆರೋಪಿ ಕರ್ತವ್ಯ ನಿರ್ವಹಿಸಿದ ರಜಿಸ್ಟರನ ಪ್ರತಿ, ರೂಟ್ ರೋಸ್ಟರ್ ನ ಪ್ರತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ಒಟ್ಟಾರೆಯಾಗಿ **ನಿಪಿ 20 ಎಂದು** ಗುರುತಿಸಲಾಯಿತು.

ನಂತರ ಅ ಅದೇ ದಿನ ಚಾಸಾ 11 ರವರು ಪಂಚನಾಮೆಯ ಕಾಲಕ್ಕೆ ಭಾವಚಿತ್ರ ತೆಗೆದ ಬಗ್ಗೆ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 14 ಎ ಎಂದು** ಗುರುತಿಸಲಾಯಿತು.

ನಂತರ ದಿನಾಂಕ 21-10-2022 ರಂದು ಚಾಸಾ 12 ರವರು ನೀಡಿದ ಅಪಘಾತಕ್ಕೋಳಪಟ್ಟ ವಾಹನಗಳ ಯಾಂತ್ರಿಕ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು **ನಿಪಿ 15 ಬಿ ಎಂದು** ಗುರುತಿಸಲಾಯಿತು.

ನಂತರ ದಿನಾಂಕ 07-11-2022 ರಂದು ಆರೋಪಿ 2 ರವರನ್ನು ದಸ್ತಗೀರ್ ಮಾಡಿ ದಸ್ತಗೀರ್ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆತನಿಗೆ ಕಲಂ 133 ರಡಿಯಲ್ಲಿ ನೊಟೀಸ ನೀಡಿರುತ್ತೇನೆ. ಸದರಿ ನೊಟೀಸ ನ್ನು ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ಬಾಂಡ್ ಪತ್ರ ಪಡೆದು ಬೈಕ್ ಅನ್ನು ಬಿಡುಗಡೆ ಮಾಡಿರುತ್ತೇನೆ. ನೊಟೀಸ್ ಅನ್ನು **ನಿಪಿ 21 ಎಂದು,** ಉತ್ತರವನ್ನು **ನಿಪಿ 22 ಎಂದು,** ಬಾಂಡ್ ಪತ್ರವನ್ನು **ನಿಪಿ 23 ಎಂದು** ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು **ನಿಪಿ 21 ಎ, 22 ಎ ಮತ್ತು 23 ಎ ಎಂದು** ಗುರುತಿಸಲಾಯಿತು.

ದಿನಾಂಕ 21-11-2022 ರಂದು ಚಾಸಾ 13 ರವರಲ್ಲಿ ಮೌಖಿಕವಾಗಿ ಕೋರಿಕೊಂಡಂತೆ ನೀಡಿದ ಗಾಯಾಳುಗಳ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರಗಳನ್ನು ಈಗಾಗಲೇ ನಿಪಿ 11 ಮತ್ತು 12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 11 ಬಿ ಮತ್ತು 12 ಬಿ ಎಂದು** ಗುರುತಿಸಲಾಯಿತು.

ಅದೇ ದಿನ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಧಾರಗಳು ಲಭಿಸಿದ್ದರಿಂದ ತನಿಖೆ ಪೂರೈಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ನಿವೇದಿಸಿಕೊಂಡಿರುತ್ತೇನೆ..

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ಆರೋಪಿ 1 ರವರು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

ಅಪಘಾತಕ್ಕೋಳಪಟ್ಟ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು :** ಆರೋಪಿತರ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಅಪಘಾತ ಆರೋಪಿ 1 ರವರ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರ ವಾಹನಕ್ಕೆ ಆರೋಪಿ 2 ರವರ ವಾಹನ ತಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರು ತಮ್ಮ ವಾಹನವನ್ನು ಚಲಾಯಿಸಿಕೊಂಡು ಹೋಗುತ್ತಿರುವಾಗ ಆರೋಪಿ 2 ರವರು ಬಸ್ ಅನ್ನು ಓವರಟೇಕ್ ಮಾಡುವಾಗ ತಾವೇ ನಿಯಂತ್ರಣ ತಪ್ಪಿ ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಇಬ್ಬರ ತಪ್ಪಿನಿಂದ ಆಗಿದೆ ಎನ್ನುತ್ತಾರೆ. ಆರೋಪಿ 2 ರವರು ಸದರಿ ಪ್ರಕರಣದಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ದಂಡ ಭರಣ ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆರೋಪಿ 2 ರವರೊಂದಿಗೆ ಶಾಮೀಲಾಗಿ ಆರೋಪಿ 1 ರವರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಜಾಗದಲ್ಲಿ ಪಂಚನಾಮೆ ಮಾಡಿಲ್ಲ, ಭಾವಚಿತ್ರವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಕಚೇರಿಯಲ್ಲಿಯೇ ಕುಳಿತು ಪಂಚನಾಮೆ, ಕಚ್ಚಾ ನಕಾಶೆ ಮತ್ತು ಭಾವಚಿತ್ರಗಳನ್ನು ತಯಾರಿಸಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ 1 ರವರ ತಪ್ಪು ಇಲ್ಲದಿದ್ದರೂ ಸಹ 2 ನೇ ಆರೋಪಿಗೆ ಅಪಘಾತ ವಿಮೆ ಪಡೆಯಲು ಅನುಕೂಲವಾಗಲು ಆರೋಪಿ 1 ರವರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.